ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001

ದೂರವಾಣಿ ಸಂಖ್ಯೆ:080-22372738, e-mail : karnregs@gmail.com

ಸಂಖ್ಯೆ: ಗ್ರಾಅಪ 383 ಉಖಾಯೋ 2014 ದಿನಾಂಕ:24.03.2015

# ಅಧಿಕೃತ ಜ್ಞಾಪನಾ

| | |
|---|---|
| ವಿಷಯ: | ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕ ಉದ್ಯೋಗ ಖಾತರಿ ನಿಧಿಯಿಂದ e-FMS ತಂತ್ರಾಂಶದ ಮೂಲಕ ಸಾಮಗ್ರಿ ವೆಚ್ಚ ಪಾವತಿಗಾಗಿ 18 ಜಿಲ್ಲಾ ಪಂಚಾಯಿತಿಗಳ ಬ್ಯಾಂಕ್ ಖಾತೆಗೆ 2014-15ನೇ ಸಾಲಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ. |
| ಉಲ್ಲೇಖ: | ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ ನಿಯಮ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 37 ಉಖಾಯೋ2008 ದಿನಾಂಕ:16.03.2009. |

## ಪ್ರಸ್ತಾವನೆ :

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ ನಿಯಮಗಳು 2008ರ ನಿಯಮ 3ರ ಅಡಿ ಮೇಲೆ ಉಲ್ಲೇಖದಲ್ಲಿನ ಸರ್ಕಾರದ ಆದೇಶದನ್ವಯ ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ಸ್ಥಾಪಿಸಲಾಗಿರುತ್ತದೆ. ಸದರಿ ನಿಯಮಗಳಡಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುದಾನವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಅದರಂತೆ ಯೋಜನೆಯ ಅನುಷ್ಠಾನದ ಪ್ರಗತಿಯನ್ನು ದಿನಾಂಕ:24.03.2015 ರಂದು ಪರಿಶೀಲಿಸಲಾಗಿದ್ದು, 18 ಜಿಲ್ಲಾ ಪಂಚಾಯಿತಿಗಳ e-FMS ತಂತ್ರಾಂಶದ ಮೂಲಕ ಸಾಮಗ್ರಿ ವೆಚ್ಚ ಪಾವತಿಗಾಗಿ ಪ್ರತ್ಯೇಕವಾಗಿ ತೆರೆದಿರುವ ಬ್ಯಾಂಕ್ ಖಾತೆಗೆ **₹.1870.00** ಲಕ್ಷ (ಹದಿನೆಂಟು ಕೋಟಿ ಎಪ್ಪತ್ತು ಲಕ್ಷ ರೂ. **ಗಳು ಮಾತ್ರ**) ಗಳ ಅನುದಾನವನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ.

## ಸರ್ಕಾರದ ಆದೇಶ ಸಂ:ಗ್ರಾಅಪ:383:ಉಖಾಯೋ-2014 ಬೆಂಗಳೂರು ದಿನಾಂಕ:24.03.2015,(ಕ್ರಸ.115)

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಗಣಿಸಿ ಅನುಬಂಧದಲ್ಲಿರುವ **18** ಜಿಲ್ಲಾ ಪಂಚಾಯಿತಿಗಳ e-FMS ತಂತ್ರಾಂಶದ ಮೂಲಕ ಸಾಮಗ್ರಿ ವೆಚ್ಚ ಪಾವತಿಗಾಗಿ ಪ್ರತ್ಯೇಕವಾಗಿ ತೆರೆದಿರುವ ಬ್ಯಾಂಕ್ ಖಾತೆಗೆ **₹.1870.00** ಲಕ್ಷ (ಹದಿನೆಂಟು ಕೋಟಿ ಎಪ್ಪತ್ತು ಲಕ್ಷ ರೂ. ಗಳು ಮಾತ್ರ) ಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ನಿಧಿಯಿಂದ ನೇರವಾಗಿ ವರ್ಗಾಯಿಸಲು ಆದೇಶಿಸಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲಾ ಪಂಚಾಯಿತಿಗಳ ಹೆಸರು | ವರ್ಗಾಯಿಸಬೇಕಾಗಿರುವ ಅನುದಾನದ ವಿವರ | | |
|---|---|---|---|---|
| | | ಕೇಂದ್ರ ಪಾಲು | ರಾಜ್ಯ ಪಾಲು | ಒಟ್ಟು |
| 1 | ಬಾಗಲಕೋಟೆ | 90.00 | 10.00 | 100.00 |
| 2 | ಬೆಂಗಳೂರು (ಗ್ರಾಮಾಂತರ) | 45.00 | 5.00 | 50.00 |
| 3 | ಬೆಳಗಾವಿ | 225.00 | 25.00 | 250.00 |
| 4 | ಬಳ್ಳಾರಿ | 22.50 | 2.50 | 25.00 |
| 5 | ಬೀದರ್ | 67.50 | 7.50 | 75.00 |
| 6 | ಚಾಮರಾಜನಗರ | 90.00 | 10.00 | 100.00 |
| 7 | ಚಿಕ್ಕಮಗಳೂರು | 63.00 | 7.00 | 70.00 |
| 8 | ಚಿತ್ರದುರ್ಗ | 180.00 | 20.00 | 200.00 |
| 9 | ದಾವಣಗೆರೆ | 180.00 | 20.00 | 200.00 |
| 10 | ಗುಲ್ಬರ್ಗ | 45.00 | 5.00 | 50.00 |
| 11 | ಹಾಸನ | 153.00 | 17.00 | 170.00 |
| 12 | ಹಾವೇರಿ | 135.00 | 15.00 | 150.00 |



24/3/15

| | | | | |
|---|---|---|---|---|
| 13 | ಕೊಡಗು | 9.00 | 1.00 | 10.00 |
| 14 | ಕೋಲಾರ | 90.00 | 10.00 | 100.00 |
| 15 | ಕೊಪ್ಪಳ | 90.00 | 10.00 | 100.00 |
| 16 | ರಾಯಚೂರು | 90.00 | 10.00 | 100.00 |
| 17 | ತುಮಕೂರು | 90.00 | 10.00 | 100.00 |
| 18 | ಉತ್ತರ ಕನ್ನಡ | 18.00 | 2.00 | 20.00 |
| | ಒಟ್ಟು | 1683.00 | 187.00 | 1870.00 |

ಈ ಅನುದಾನವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಜಿ–ಸೇವಾ ಶಾಖೆ, ಎಲ್.ಸಿ.ರೋಡ್, ಶಿವಾಜಿನಗರ, ಬೆಂಗಳೂರು ಖಾತೆ ಸಂಖ್ಯೆ:64002298270 ಯಿಂದ ಅನುಬಂಧದಲ್ಲಿರುವ 18 ಜಿಲ್ಲಾ ಪಂಚಾಯಿತಿಗಳ ಮ.ಗಾ.ರಾ.ಗ್ರಾ.ಉ.ಖಾಯೋಜನೆಯ e-FMS ತಂತ್ರಾಂಶದ ಮೂಲಕ ಸಾಮಗ್ರಿ ವೆಚ್ಚ ಪಾವತಿಗಾಗಿ ಪ್ರತ್ಯೇಕವಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲು ಆದೇಶಿಸಿದೆ. ಬ್ಯಾಂಕ್ ಖಾತೆಗೆ ಜಮಾವಾಗುವಲ್ಲಿ ವಿಳಂಬವಾದಲ್ಲಿ ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರ ದೂರವಾಣಿ ಸಂ:080-22342161 ಕ್ಕೆ ಸಂಪರ್ಕಿಸಲು ಸೂಚಿಸಿದೆ.

ಈ ಆದೇಶದ ಪ್ರತಿಯನ್ನು ಅಂತರ್ಜಾಲ e-mail ID:nregs-ka@nic.in ಸಂದೇಶದ ಮೂಲಕ ಕಳುಹಿಸಲಾಗಿದೆ.

ಷರತ್ತುಗಳು:–

1. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮಾರ್ಗಸೂಚಿಯನ್ವಯ e-FMS ತಂತ್ರಾಂಶದ ಮೂಲಕ ಸಾಮಗ್ರಿ ವೆಚ್ಚ ಪಾವತಿ ಮಾಡುವ ಸಲುವಾಗಿ ನಿಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ಪ್ರತ್ಯೇಕವಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಿದೆ.
2. ಬಿಡುಗಡೆಗೊಳಿಸಿರುವ ಅನುದಾನವನ್ನು e-FMS ತಂತ್ರಾಂಶದ ಮೂಲಕ ಸಾಮಗ್ರಿ ವೆಚ್ಚ ಪಾವತಿಸಲು ಕಟ್ಟುನಿಟ್ಟಿನ ಕ್ರಮ ವಹಿಸಲು ಆದೇಶಿಸಿದೆ.
3. ಮುಂದಿನ ಅನುದಾನ ಬೇಡಿಕೆ ಪ್ರಸ್ತಾವನೆ ಸಲ್ಲಿಸುವಾಗ ಜಾಬ್‌ಕಾರ್ಡ್ ಶೇ.100ರಷ್ಟು ನ್ಯಾಯಸಮ್ಮತ (Validation) ಮಾಡಿ ದೃಢೀಕರಿಸುವುದು ಹಾಗೂ ಒಂದು ಕುಟುಂಬಕ್ಕೆ ಒಂದೇ ಜಾಬ್‌ಕಾರ್ಡ್ ಇರುವಂತೆ ಎಲ್ಲಾ ಅವಶ್ಯಕ್ರಮ ಜರುಗಿಸುವುದು.
4. ಈ ಯೋಜನೆಯ ಅಡಿ ಅನುಷ್ಠಾನಗೊಳ್ಳುವ ಕಾಮಗಾರಿಗಳ ಪೈಕಿ ಜಿಲ್ಲಾ ಪಂಚಾಯತ್‌ನಿಂದ ಶೇ.10, ಕಾರ್ಯಕ್ರಮ ಅಧಿಕಾರಿಗಳಿಂದ ಶೇ.25 ಹಾಗೂ ಅನುಷ್ಠಾನ ಅಧಿಕಾರಿಗಳಿಂದ ಶೇ.100 ರಷ್ಟು ಕಾಮಗಾರಿಗಳ ಪರಿಶೀಲನೆ ನಡೆಸಿದ ಬಗ್ಗೆ ದೃಢೀಕರಿಸುವುದು.
5. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಅನುಷ್ಠಾನದ ಪೈಕಿ ಈಗಾಗಲೇ MIS ನಲ್ಲಿರುವ ಅಂಕಿ ಅಂಶಗಳಿಗೂ ಕ್ಷೇತ್ರದಲ್ಲಿರುವ ಭೌತಿಕ ಹಾಗೂ ಆರ್ಥಿಕ ಪ್ರಗತಿಗೆ ಹೊಂದಾಣಿಕೆಯಾಗತಕ್ಕದ್ದು.
6. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಉಪಯೋಗಿಸಿಕೊಂಡು ಗ್ರಾಮ/ತಾಲ್ಲೂಕು/ ಜಿಲ್ಲಾ ಪಂಚಾಯಿತಿಗಳಲ್ಲಿ ಸ್ಥಿರಾಸ್ತಿ/ಚರಾಸ್ತಿಯನ್ನು ಸೃಜಿಸಿದಲ್ಲಿ ಆ ಬಗ್ಗೆ ವಿವರಗಳನ್ನು ಸ್ಥಿರಾಸ್ತಿ ವಹಿಯ ದಾಖಲೆ ನಿರ್ವಹಿಸತಕ್ಕದ್ದು.
7. ಬಿಡುಗಡೆಯಾದ ಅನುದಾನಕ್ಕೆ ಸಂಬಂಧಪಟ್ಟಂತೆ ನಗದು ಪುಸ್ತಕವನ್ನು ನಿರ್ವಹಿಸತಕ್ಕದ್ದು, ಹಾಗೂ ಜಮಾ ಖರ್ಚಿಗೆ ಸಂಬಂಧಿಸಿದಂತೆ ವಿವರಗಳನ್ನು MISನಲ್ಲಿ ಅಳವಡಿಸಿ Bank Pass Sheet ನೊಂದಿಗೆ ಮರು ಹೊಂದಾಣಿಕೆ ಕಾರ್ಯವನ್ನು ಪ್ರತಿ ತಿಂಗಳೂ ತಪ್ಪದೇ ಕೈಗೊಳ್ಳುವುದರ ಮೂಲಕ ಒಂದೇ ಅಂಕಿಅಂಶ ಎಲ್ಲಾ ದಾಖಲೆಗಳಲ್ಲಿ ಇರುವಂತೆ ನೋಡಿಕೊಳ್ಳಲು ಸೂಕ್ತ ಕ್ರಮ ವಹಿಸುವುದು.
8. ಯೋಜನೆ ಅನುಷ್ಠಾನದಲ್ಲಿ ಸಾಮಾಜಿಕ ತಪಾಸಣೆ (Social Audit) ಪ್ರಕ್ರಿಯೆ ನಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
9. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮಾರ್ಗಸೂಚಿಗಳು ಪಾಲನೆಯಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.
10. ನಿಮ್ಮ ಜಿಲ್ಲೆಯ ಮಾರ್ಚ್–2014ರಲ್ಲಿ ವೆಚ್ಚ ಮಾಡಿರುವ ಬಗ್ಗೆ ನಿಮ್ಮ ತನಿಖೆಯಲ್ಲಿ ಸಂಶಯ ಅಥವಾ ತಿರಸ್ಕೃತವಾಗಿರುವ ಬಿಲ್ಲುಗಳ ಪಾವತಿಯನ್ನು ಮಾಡದಂತೆ ಹಾಗೂ ಯೋಜನೆಯ ಮಾರ್ಗ ಸೂಚಿಗಳು ಪಾಲನೆಯಾಗಿರುವ ಬಗ್ಗೆ

ಖಾತರಿಪಡಿಸಿಕೊಳ್ಳುವುದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿಗಳ ಹೊಣೆಯಾಗಿರುತ್ತದೆ.

11. ಸಾಮಗ್ರಿ ವೆಚ್ಚ ಪಾವತಿಸುವ ಬಿಲ್ಲುಗಳಲ್ಲಿ ನಿಯಮಾನುಸಾರ ತೆರಿಗೆಗಳನ್ನು ಕಟಾಯಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಚಾಚೂ ತಪ್ಪದೇ ಜಮಾ ಮಾಡಲು ಸೂಕ್ತ ಕ್ರಮವಹಿಸತಕ್ಕದ್ದು.

ಮೇಲಿನ ಷರತ್ತುಗಳನ್ನು ಚಾಚೂ ತಪ್ಪದೆ ಪಾಲಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ವಹಿಸುವುದು.

(ಮುನೀಶ್ ಮೌದ್ಗಿಲ್)
ಆಯುಕ್ತರು,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಸಹಾಯಕ ಮಹಾವ್ಯವಸ್ಥಾಪಕರು, ಎಸ್.ಬಿ.ಎಮ್., ಜಿ–ಸೇವಾ ಶಾಖೆ, ಎಲ್.ಸಿ.ರೋಡ್, ಶಿವಾಜಿನಗರ, ಬೆಂಗಳೂರು ಇವರಿಗೆ ಅನುಬಂಧದಲ್ಲಿ ತೋರಿಸಿರುವಂತೆ 18 ಜಿಲ್ಲಾ ಪಂಚಾಯತಿಗಳ ಮ.ಗಾ.ರಾ.ಗ್ರಾ.ಉ.ಖಾ. ಯೋಜನೆಯ e-FMS ತಂತ್ರಾಂಶದ ಮೂಲಕ ಸಾಮಗ್ರಿ ವೆಚ್ಚ ಪಾವತಿಗಾಗಿ ಪ್ರತ್ಯೇಕವಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ತಕ್ಷಣವೇ ಹಣವನ್ನು ವರ್ಗಾಯಿಸಲು ಕೋರಿ ಕಳುಹಿಸಲಾಗಿದೆ. ಯಾವುದೇ ಕಾರಣಕ್ಕೆ ಅನುದಾನವು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳ ಖಾತೆಗೆ ಹೊಂದಾಣಿಕೆಯಾಗದೆ ಹಿಂತಿರುಗಿ ಬಂದಲ್ಲಿ ವಿವರವನ್ನು ಕೂಡಲೇ ಲೆಕ್ಕಪತ್ರ ಶಾಖೆಗೆ ನೀಡುವುದು.
2. ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಇವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು.
4. ಉಪ ಮಹಾಲೇಖಪಾಲರು, (ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ) ಮಹಾಲೇಖಪಾಲರ ಕಛೇರಿ, ಹೊಸಕಟ್ಟಡ, (ANNEX C) ಬೆಂಗಳೂರು.
5. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗ.

ಪ್ರತಿಯನ್ನು:-

1. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಜಿಲ್ಲಾ ಪಂಚಾಯತ್) ವಿಧಾನ ಸೌಧ, ಬೆಂಗಳೂರು
2. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು.
3. ಸಂಬಂಧಪಟ್ಟ ಜಿಲ್ಲೆಯ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ.
4. ಮುಖ್ಯ ಕಾರ್ಯಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರ ಮಾಹಿತಿಗೆ.
5. ವಿಶೇಷ ಆಯುಕ್ತರು (ಅರಣ್ಯ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರ ಮಾಹಿತಿಗೆ.
6. ಜಂಟಿ ನಿರ್ದೇಶಕರು (ತಾಂತ್ರಿಕ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರ ಮಾಹಿತಿಗೆ.
7. ಜಂಟಿ ನಿರ್ದೇಶಕರು (ತೋಟಗಾರಿಕೆ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರ ಮಾಹಿತಿಗೆ.
8. ಜಂಟಿ ನಿರ್ದೇಶಕರು (ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರ ಮಾಹಿತಿಗೆ.
9. ಎಂ.ಐ.ಎಸ್.ಶಾಖೆ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ MISನಲ್ಲಿ ಆರೋಹಣ ಮಾಡಲು ಅಗತ್ಯಕ್ರಮಕ್ಕಾಗಿ
10. ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ Website ನಲ್ಲಿ ಆರೋಹಣ ಮಾಡಲು ಅಗತ್ಯಕ್ರಮಕ್ಕಾಗಿ

e-FMS MATERIAL FUND RELEASES UNDER MGNREGS FOR THE F.Y 2014-15

Date:24.03.2015 — RO No. 115

| Sl No | District Name | Bank Name | SB Account No | Branch Name | IFSC code | ReleasesAmount ( in lakhs) |
|---|---|---|---|---|---|---|
| 1 | BAGALKOTE | STATE BANK OF MYSORE | 64120311559 | G SEVA BRANCH | SBMY0040681 | 100.00 |
| 2 | BANGALORE ( URBAN ) | STATE BANK OF MYSORE | 64120324921 | G SEVA BRANCH | SBMY0040681 | 0.00 |
| 3 | BANGALORE ( RURAL ) | STATE BANK OF MYSORE | 64120325073 | G SEVA BRANCH | SBMY0040681 | 50.00 |
| 4 | BELGAUM | STATE BANK OF MYSORE | 64120325164 | G SEVA BRANCH | SBMY0040681 | 250.00 |
| 5 | BELLARY | STATE BANK OF MYSORE | 64120325277 | G SEVA BRANCH | SBMY0040681 | 25.00 |
| 6 | BIDAR | STATE BANK OF MYSORE | 64120325357 | G SEVA BRANCH | SBMY0040681 | 75.00 |
| 7 | BIJAPUR | STATE BANK OF MYSORE | 64120325379 | G SEVA BRANCH | SBMY0040681 | 0.00 |
| 8 | CHAMARAJNAGAR | STATE BANK OF MYSORE | 64120325437 | G SEVA BRANCH | SBMY0040681 | 100.00 |
| 9 | CHICKABALAPUR | STATE BANK OF MYSORE | 64120341710 | G SEVA BRANCH | SBMY0040681 | 0.00 |
| 10 | CHICKAMAGALUR | STATE BANK OF MYSORE | 64120341721 | G SEVA BRANCH | SBMY0040681 | 70.00 |
| 11 | CHITRADURGA | STATE BANK OF MYSORE | 64120341743 | G SEVA BRANCH | SBMY0040681 | 200.00 |
| 12 | DAKSHINA KANNADA | STATE BANK OF MYSORE | 64120341765 | G SEVA BRANCH | SBMY0040681 | 0.00 |
| 13 | DAVANAGERE | STATE BANK OF MYSORE | 64120341776 | G SEVA BRANCH | SBMY0040681 | 200.00 |
| 14 | DHARWAR | STATE BANK OF MYSORE | 64120341787 | G SEVA BRANCH | SBMY0040681 | 0.00 |
| 15 | GADAG | STATE BANK OF MYSORE | 64120341798 | G SEVA BRANCH | SBMY0040681 | 0.00 |
| 16 | GULBARGA | STATE BANK OF MYSORE | 64120341801 | G SEVA BRANCH | SBMY0040681 | 50.00 |
| 17 | HASSAN | STATE BANK OF MYSORE | 64120341834 | G SEVA BRANCH | SBMY0040681 | 170.00 |
| 18 | HAVERI | STATE BANK OF MYSORE | 64120341845 | G SEVA BRANCH | SBMY0040681 | 150.00 |
| 19 | KODAGU | STATE BANK OF MYSORE | 64120341856 | G SEVA BRANCH | SBMY0040681 | 10.00 |
| 20 | KOLAR | STATE BANK OF MYSORE | 64120341878 | G SEVA BRANCH | SBMY0040681 | 100.00 |
| 21 | KOPPAL | STATE BANK OF MYSORE | 64120341889 | G SEVA BRANCH | SBMY0040681 | 100.00 |
| 22 | MANDYA | STATE BANK OF MYSORE | 64120341914 | G SEVA BRANCH | SBMY0040681 | 0.00 |
| 23 | MYSORE | STATE BANK OF MYSORE | 64120341947 | G SEVA BRANCH | SBMY0040681 | 0.00 |
| 24 | RAICHUR | STATE BANK OF MYSORE | 64120341992 | G SEVA BRANCH | SBMY0040681 | 100.00 |
| 25 | RAMANAGARA | STATE BANK OF MYSORE | 64120342000 | G SEVA BRANCH | SBMY0040681 | 0.00 |
| 26 | SHIMOGA | STATE BANK OF MYSORE | 64120342022 | G SEVA BRANCH | SBMY0040681 | 0.00 |
| 27 | TUMKUR | STATE BANK OF MYSORE | 64120342033 | G SEVA BRANCH | SBMY0040681 | 100.00 |
| 28 | UDUPI | STATE BANK OF MYSORE | 64120342055 | G SEVA BRANCH | SBMY0040681 | 0.00 |
| 29 | UTTARA KANNADA | STATE BANK OF MYSORE | 64120342077 | G SEVA BRANCH | SBMY0040681 | 20.00 |
| 30 | YADGIRI | STATE BANK OF MYSORE | 64120342113 | G SEVA BRANCH | SBMY0040681 | 0.00 |
| | | | | TOTAL | | 1870.00 |

Rs. 1870.00 Lakhs( Eighteen Crore Seventy Lakhs only )

COMMISSIONER
COMMISSIONERATE OF RD, RDPR Dept,
BANGALORE